ಇರಬೇಕೆಂದು ಮಗನಿಗೆ ಹೇಳಿದ್ದರು. ಒಂದು ವರ್ಷ ಇರುವುದು ಸಾಧ್ಯವಾಗದು, ಎರಡು ತಿಂಗಳು ಇರುತ್ತೇನೆ ಎಂದಿದ್ದ ನರಹರಿ. ಮಗನ ಸಾಧನೆಯಿಂದ ತಂದೆ ಹರಿಹರ ಮತ್ತು ತಾಯಿ ಗೌರಿಗೆ ಸಂತಸ ಆಯಿತು. ಪಿಎಚ್‌ಡಿ ಮುಗಿದರೆ ಮಗನ ಜೊತೆ ಮಂತ್ರಾಲಯಕ್ಕೆ ಹೋಗುವ ಹರಕೆ ಹೊತ್ತಿದ್ದರು. ಇಂಡಿಯಾದಲ್ಲಿ ಕನಿಷ್ಠ ಒಂದು ವರ್ಷ ಇರಬೇಕೆಂದು ಹರಿಹರ ಮಗನಿಗೆ ಹೇಳಿದ್ದ. ಒಂದು ವರ್ಷ ಇರುವುದು ಸಾಧ್ಯವಾಗದು, ಎರಡು ತಿಂಗಳು ಇರುತ್ತೇನೆ ಎಂದಿದ್ದ ನರಹರಿ. ಮದುವೆಯ ನಂತರ ಒಂದು ತಿಂಗಳು ಎಲ್ಲಿಗೂ ಹೋಗುವುದು ಬೇಡ, ಅನಂತರ ಮಂತ್ರಾಲಯಕ್ಕೆ ಹೋಗಿ ಬರೋಣ ಎಂದಿದ್ದಳು ನರಹರಿಯ ತಾಯಿ ಗೌರಿ.

ಎಮ್‌ಎಸ್‌ಸಿ ಓದುವ ಕಾಲದ ಯುನಿವರ್ಸಿಟಿಯಲ್ಲಿ ನರಹರಿಗೆ ಶಾಲ್ಮಲಿ ಎಂಬ ಚೆಲುವೆಯ ಪರಿಚಯವಾಗಿತ್ತು. ನರಹರಿಯ ತಂದೆ ಹರಿಹರನಿಗೆ ಶಾಲ್ಮಲಿಯ ತಂದೆ ಜಯವಂತನ ಪರಿಚಯವಿತ್ತು. ಸಂತೋಷದಿಂದಲೇ ಎರಡು ಕಡೆಯವರೂ ಮದುವೆಗೆ ಒಪ್ಪಿದರು. ನರಹರಿ ಬೇಗನೇ ಕೆಲಸಕ್ಕೆ ಮರಳ ಬೇಕೆಂದು ಹೇಳಿದ್ದರಿಂದ ಹೆಚ್ಚು ತಡ ಮಾಡದೆ ಮದುವೆಯೂ ನಡೆಯಿತು. ಮದುವೆಯ ನಂತರ ಒಂದು ತಿಂಗಳು ಸಂತೋಷ ಸಂಭ್ರಮದಿಂದ ಕಳೆಯಿತು. ಜಯವಂತನ ಬಳಿ ನಾಲ್ವರೂ ಆರಾಮವಾಗಿ ಕುಳಿತುಕೊಳ್ಳುವಷ್ಟು ದೊಡ್ಡ ಕಾರು ಇತ್ತು. ಅಷ್ಟು ದೂರಕ್ಕೆ ನೀವು ಯಾರೂ ಡ್ರೈವ್ ಮಾಡುವುದು ಬೇಡ, ಡ್ರೈವರನ್ನು ಗೊತ್ತು ಮಾಡಿಕೊಳ್ಳಿ ಎಂದು ಶಾಲ್ಮಲಿಯ ತಾಯಿ ಗೌರಿ ಗಂಡನಿಗೆ ಹೇಳಿದಳು.

ಡ್ರೈವರನ್ನು ಗೊತ್ತು ಮಾಡಿಕೊಂಡು ಮಂತ್ರಾಲಯಕ್ಕೆ ನಾಲ್ಕು ಮಂದಿಯೂ ಪ್ರಯಾಣಕ್ಕೆ ಅಣಿಯಾದರು. ಅಲ್ಲಿ ಎರಡು ದಿನ ಸಂತೋಷದಿಂದ ಕಳೆದು ಅಲ್ಲಿಂದ ಮರಳಿ ಬರುವ ದಾರಿಯಲ್ಲಿ ನರಹರಿ ಉಳಿದ ಅರ್ಧ ದಾರಿ ತಾನೇ ಡ್ರೈವ್ ಮಾಡುವೆನೆಂದ. ಕಾರು ನಾಲ್ಕೈದು ಕಿಲೊಮೀಟರ್ ಕ್ರಮಿಸಿರ ಬಹುದಷ್ಟೆ; ಹಿಂದಿನಿಂದ ವೇಗವಾಗಿ ಬಂದ ಒಂದು ಟ್ರಕ್ ಕಾರಿಗೆ ಬಡಿಯಿತು. ನರಹರಿಯ ತಲೆಗೆ ಸ್ಟಿಯರಿಂಗ್‌ಗೆ ಬಡಿದು ಪ್ರಜ್ಞೆ ಕಳೆದುಕೊಂಡರೂ ಹತ್ತು ಹದಿನೈದು ನಿಮಿಷಗಳಲ್ಲಿ ಪ್ರಜ್ಞೆ ಮರಳಿ ಬಂತು. ಪ್ರಜ್ಞೆ ಮರಳಿದಾಗ ನರಹರಿ ಕಂಡದ್ದು ಶವವಾಗಿ ಬಿದ್ದಿದ್ದ ತಾಯಿ ತಂದೆಯರನ್ನು. ಬೇರೆ ಏನೂ ನರಹರಿಯ ಕಣ್ಣು ಕಾಣಲಿಲ್ಲ.

ತಾಯಿ ತಂದೆಯನ್ನು ಕಳೆದುಕೊಂಡ ನರಹರಿ ಹದಿನೈದು ದಿನ ಹೇಗೋ ಕಳೆದು, 'ಈ ರೀತಿ ಇನ್ನು ಇಲ್ಲಿರಲು ಸಾಧ್ಯವಿಲ್ಲ ಶಾಲಿ' ಎಂದು ನರಹರಿ ನುಡಿದಾಗ ಶಾಲ್ಮಲಿಯ ಪ್ರತಿಕ್ರಿಯೆಯಾಗಿ ಕಣ್ಣೀರ ಧಾರೆಯ ಹೊರತು ಮಾತು ಹೊರಡಲಿಲ್ಲ. ಶಾಲ್ಮಲಿಯ ತಾಯಿ ತಂದೆ ಬಂದು ಅಷ್ಟು ದಿನವೂ ಮಗಳು ಮತ್ತು ಅಳಿಯನ ಜೊತೆಗಿದ್ದರೂ ಒಬ್ಬರಿನ್ನೊಬ್ಬರೊಡನೆ ಏನು ಮಾತಾಡುವುದು ಎಂದು ತಿಳಿಯದೆ ಬಹುತೇಕ ಮೌನವಾಗಿಯೇ ಒಂದೆರಡು ವಾರ ಕಳೆಯಿತು.

4

ಒಂದು ದಿನ ಶಾಲ್ಮಲಿಯ ತಾಯಿ ತಂದೆಯರ ಮುಂದೆ ನರಹರಿ ಬಹಳ ಮೃದುವಾಗಿ, 'ಇಲ್ಲಿಯೇ ಹೀಗೆ ದಿನ ಕಳೆಯಲು ಸಾಧ್ಯವಿಲ್ಲ. ಅಮೆರಿಕೆಯಲ್ಲಿ ನಾನು ಮಾಡಬೇಕಾದ ಕೆಲಸ ಒಂದಷ್ಟು ಇದೆ. ಆ ಬಗ್ಗೆ ಅಮೆರಿಕೆಯಿಂದ ಕಾಲ್ ಬರುತ್ತಾ ಇದೆ. ನಾವು ಹೊರಡುತ್ತೇವೆ' ಎಂದ ನರಹರಿ. ಅಷ್ಟು ಹೇಳುವಾಗಲೇ ಕಂಠ ಗದ್ಗದವಾಗಿ ನರಹರಿ ಅಳತೊಡಗಿದ. ಅವನನ್ನು ಹೇಗೆ ಸಮಾಧಾನಪಡಿಸಬೇಕೆಂದು ಶಾಲ್ಮಲಿಗೂ ತಿಳಿಯಲಿಲ್ಲ; ಅವಳ ತಾಯಿ ತಂದೆಯರಿಗೂ ತಿಳಿಯಲಿಲ್ಲ. ನರಹರಿಯೊಬ್ಬ ಹೆಣ್ಣು ಹೃದಯದ ಮನುಷ್ಯ ಎನ್ನುವುದನ್ನು ಶಾಲ್ಮಲಿ ಮತ್ತು ಅವಳ ತಾಯಿ ತಂದೆಯರ ಅರಿವಿಗೆ ಬಂದದ್ದು ಆಗಲೇ. ಸಂಭವಿಸಿದ ಅಪಘಾತದ ಕುರಿತು ಯಾರೂ ಮಾತಾಡಲಿಲ್ಲ. ಆ ಕುರಿತು ಮಾತಾಡಿದರೆ ನರಹರಿಯಿಂದ ಸಹಿಸಿಕೊಳ್ಳಲು ಸಾಧ್ಯವಿಲ್ಲ ಎಂದು ಅವರು ಮೂವರಿಗೂ ಗೊತ್ತಿತ್ತು. ಅಪಘಾತ ಹೇಗೇ ನಡೆದಿರಲಿ, ಅದು ತನ್ನಿಂದಲೇ ಆಯಿತು ಎಂಬ ಭಾವನೆ ನರಹರಿಗಿತ್ತು. ನೀನಿದ್ದಲ್ಲಿ ಡ್ರೈವರ್ ಚಂದ್ರಶೇಖರನಿರುತ್ತಿದ್ದರೆ ಅವನು ಸಾಯುತ್ತಿದ್ದ ಎಂಬ ಮಾತು ಅವರ ನಾಲಿಗೆ ತುದಿಗೆ ಬಂದರೂ ಯಾರೂ ಹಾಗೆ ಹೇಳಲಿಲ್ಲ. ನರಹರಿ ಯಾರನ್ನೂ ನೋಯಿಸುವವನಲ್ಲ, ಪ್ರತಿಯೊಬ್ಬರೊಂದಿಗೆ ಪ್ರೀತಿಯಿಂದ ಮಾತಾಡುವ ಮನುಷ್ಯ, ಅತ್ತೆ ಮಾವನೊಡನೆ ಅವರು ತಮ್ಮ ತಾಯಿ ತಂದೆಯರು ಎಂಬಂತೆಯೇ ನಡೆದುಕೊಳ್ಳುತ್ತಿದ್ದ.

ಮಗಳು ಮತ್ತು ಅಳಿಯನಿಗೆ ಏನಾದರೂ ಸಮಾಧಾನದ ಮಾತು ಹೇಳಬೇಕು ಎಂದು, ಶಾಲ್ಮಲಿಯ ತಂದೆ ಜಯವಂತ, 'ಮುಂದಿನ ತಿಂಗಳು ನಾವು ಅಮೆರಿಕೆಗೆ ಬಂದು ನಿಮ್ಮ ಜೊತೆ ಎರಡು ತಿಂಗಳು ಇರುತ್ತೇವೆ' ಎಂದರು.

5

ನರಹರಿ ಮತ್ತು ಶಾಲ್ಮಲಿ ಅಮೆರಿಕೆಗೆ ಮರಳಿದರು. ಆರು ಅಡಿ ಎತ್ತರದ ನರಹರಿ ಮತ್ತು ಅವನಿಗಿಂತ ಕೇವಲ ಎರಡು ಇಂಚು ಕಡಿಮೆ ಎತ್ತರದ ಶಾಲ್ಮಲಿಯ ಅನುರೂಪದ ಜೋಡಿಯನ್ನು ಮತ್ತು ಅವರ ಅಷ್ಟೇ ಮೋಹಕ ಸುಂದರ ರೂಪವನ್ನು ಕಂಡು, ಅಮೆರಿಕೆಯಲ್ಲಿರುವ ಭಾರತೀಯರಷ್ಟೇ ಅಲ್ಲ, ಅಮೆರಿಕನ್ನರು ಕೂಡ, 'ಆಹಾ ಎಷ್ಟು ಸುಂದರವಾದ ಜೋಡಿ!' ಎಂದು ಮೆಚ್ಚುಗೆಯಿಂದ ಅವರ ಎದುರೇ ಉದ್ಗರಿಸುತ್ತಿದ್ದರು. ಇದು ಅಮೆರಿಕನ್ನರು ಸಂಕೋಚವೆಂಬುದಿಲ್ಲದೆ ಬಿಚ್ಚು ಮನಸ್ಸಿನಿಂದ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸುವ ಕ್ರಮ ಎಂದರಿತ ನರಹರಿ ಮತ್ತು ಶಾಲ್ಮಲಿ ಕೇವಲ ಮುಗುಳು ನಗೆಯ ಪ್ರತಿಕ್ರಿಯೆ ತೋರುತ್ತಿದ್ದರು. ಆದರೆ ವಾಸ್ತವದಲ್ಲಿ, ಅದು ಮುಗುಳ್ನಗೆಯಂತಿಲ್ಲ ಎಂದು ನರಹರಿ ಮತ್ತು ಶಾಲ್ಮಲಿಯ ಮನಸ್ಸು ಹೇಳುತ್ತಲೇ ಇತ್ತು. ನಗಲಾಗದ ಮತ್ತು ನಗದಿರಲಾಗದ ಸ್ಥಿತಿಯಲ್ಲಿ ಹೇಗೋ ಒಂದಷ್ಟು ದಿನಗಳನ್ನು ದೂಡಿದ ನಂತರ ಒಂದು ದಿನ ಅಳುತ್ತಾ ಕುಳಿತಿದ್ದ ಶಾಲ್ಮಲಿಯೊಡನೆ ನರಹರಿ, 'ಆಗುವುದು ಆಗಿಹೋಯಿತು. ನನ್ನದೇ ತಪ್ಪು ಎಂದು ಎಷ್ಟು ದಿನ ಪರಿತಪಿಸಲು ಸಾಧ್ಯ ಶಾಲಿನಿ? ನಾನು ಮನಸ್ಸನ್ನು ಕಲ್ಲು ಮಾಡಿಕೊಂಡಿದ್ದೇನೆ. ನೀನು ಸಾಧ್ಯವಾದಷ್ಟು ಪ್ರಸನ್ನತೆಯಿಂದಿರು. ಎಷ್ಟು ದಿನ ನಾವು ಬದುಕಿರುತ್ತೇವೆ ಎಂದು ನಮಗೆ ಗೊತ್ತಿಲ್ಲ. ಆದರೆ ಬದುಕಿರುವಷ್ಟು ದಿನ ಕಷ್ಟವೋ ಸುಖವೋ, ದುಃಖವೋ ಸಂತೋಷವೋ ಸದಾ ಪ್ರಸನ್ನತೆಯಿಂದಿರಲು ನಾವು ಅಭ್ಯಾಸ ಮಾಡಿಕೊಳ್ಳಬೇಕು. ಹಾಗೆ ಮಾಡದಿದ್ದರೆ ಬದುಕಿರುವುದರಲ್ಲಿ ಯಾವ ಸ್ವಾರಸ್ಯವೂ ಇಲ್ಲ' ಎಂದ.

ಶಾಲ್ಮಲಿ ಗರ್ಭಿಣಿಯಾದಾಗ, ಆಕಸ್ಮಿಕವಾಗಿ ನರಹರಿ ಮತ್ತು ಶಾಲ್ಮಲಿಯ ಭೇಟಿಯಾದಾಗ, ಅವರ ಪರಿಚಯ ಇಲ್ಲದಿದ್ದರೂ ಪರಿಚಯ ಮಾಡಿಕೊಂಡು ಶಾಲ್ಮಲಿ ಗರ್ಭಿಣಿಯೆಂದು ಗುರುತಿಸಿದ ಅಮೆರಿಕನ್ ಮಹಿಳೆಯರು ಗಂಡ ಹೆಂಡಿರಿಬ್ಬರನ್ನೂ ಉದ್ದೇಶಿಸಿ 'ಕಂಗ್ರ್ಯಾಚುಲೇಶನ್ಸ್' ಎಂದು ಹೇಳಿ ಕೈ ಕುಲುಕಿ ಸಂತೋಷವನ್ನು ಸೂಚಿಸುತ್ತಿದ್ದರು. ಶಾಲ್ಮಲಿಯ ಹೊಟ್ಟೆಯನ್ನು ಮುಟ್ಟಿ ಸಂತೋಷ ಸೂಚಿಸುವ ಮಹಿಳೆಯರೂ ಇದ್ದರು. ಉಬ್ಬಿದ ಹೊಟ್ಟೆಯ ಬಗ್ಗೆ ಗರ್ಭಿಣಿ ಸಂಭ್ರಮಿಸಬೇಕು, ಸಂಕೋಚಪಡಬಾರದು ಎನ್ನುವ ಭಾವವನ್ನು ವ್ಯಕ್ತಪಡಿಸುವ ಅಮೆರಿಕನ್ನರ ಈ ಬಗೆಯ ತೆರೆದ ಮನಸ್ಸಿನ ರೀತಿ ರಿವಾಜುಗಳಿಗೆ ಹೊಂದಿಕೊಳ್ಳಲು ನರಹರಿ ಮತ್ತು ಶಾಲ್ಮಲಿಗೆ ಸ್ವಲ್ಪ ಕಾಲ ಬೇಕಾಯಿತು. ಮೊದ ಮೊದಲು ಮುಜುಗರಕ್ಕೊಳಗಾಗುತ್ತಿದ್ದ ಶಾಲ್ಮಲಿಗೆ ಕ್ರಮೇಣ, ಪರವಾಗಿಲ್ಲ, ಇದು ಇವರ ಸಂಸ್ಕೃತಿ, ಇದರಲ್ಲಿಯೂ ಚೆಂದ ಇದೆ, ಇದರಲ್ಲಿ ಮುಜುಗರಪಟ್ಟುಕೊಳ್ಳುವಂಥದೇನೂ ಇಲ್ಲ ಎಂದನಿಸಿತು.

ಶಾಲ್ಮಲಿಯ ಮೊದಲ ಹೆರಿಗೆಗೆ ಒಂದು ತಿಂಗಳ ಮೊದಲೇ ಅವಳ ತಾಯಿ ತಂದೆ ಅಮೆರಿಕೆಗೆ ಬಂದು ಮೂರು ತಿಂಗಳು ಇದ್ದರು. ಹೆರಿಗೆಗೆ ಮೊದಲೇ ಮಗು ಗಂಡೋ ಹೆಣ್ಣೋ ಎಂದು ಹೆರಿಗೆಯಾದ ಆಸ್ಪತ್ರೆಯಲ್ಲೇ

## ಮುತ್ತು

ಒಂದು
ಕೆನ್ನೆಗೆ
ಮುತ್ತು
ಕೊಟ್ಟಾಗ,
ಮತ್ತೊಂದು
ಕೆನ್ನೆ
ಕೊಟ್ಟಳು
ಅವಳು
ತನ್ನ
ಮಗುವಿಗೆ!

★ ಬಾಲು ಪಟಗಾರ

